**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 193/2019**

ಸಿಡಬ್ಲ್ಯು 1 ಪಿಡಬ್ಲ್ಯು - 4

ದಿನಾಂಕಃ 06.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಎಮ ಎಮ ತಹಶೀಲ್ದಾರ

ವಯಸ್ಸು : 40 ವರ್ಷ

ಉದ್ಯೋಗ : ಪಿ.ಐ ಹುಬ್ಬಳ್ಳಿ ಟೌನಪೋಲಿಸ ಠಾಣೆ

ವಾಸ ಸ್ಥಳ : ಹುಬ್ಬಳ್ಳಿ

**<u>ಮುಖ್ಯ ವಿಚಾರಣೆಃ-</u>** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು ಡಿಸೆಂಬರ 2016 ರಿಂದ 2018 ಅಗಸ್ಟ ವರೆಗೆ ಹಾರೂಗೇರಿ ಪೋಲಿಸ ಠಾಣೆಯಲ್ಲಿ ಪಿ ಎಸ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ನಾನು 3ನೇ ಆರೋಪಿ ನೋಡಿಲ್ಲ. 1 ಮತ್ತು 2ನೇ ಆರೋಪಿತರನ್ನು ನೋಡಿದ್ದೇನೆ. (2ನೇ ಆರೋಪಿ ಮೃತನಾಗಿದ್ದು, 1ನೇ ಆರೋಪಿ ಗೈರು ಹಾಜರಿದ್ದು ಆತನ ಗುರುತಿಸುವಿಕೆಗೆ ತಕರಾರು ಇಲ್ಲಎಂದು 1ನೇ ಆರೋಪಿ ಪರ ವಕೀಲರು ತಿಳಿಸಿದ್ದಾರೆ)

2) ದಿನಾಂಕಃ 26.04.2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಗ್ಗೆ 09.00 ಗಂಟೆಗೆ ಇಬ್ಬರು ವ್ಯಕ್ತಿಗಳು ಮೋಟಾರಸೈಕಲ ಮೇಲೆ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಎಲ್ಲಿಂದಲೋ ತಂದು ಖಣದಾಳ ಗ್ರಾಮದ ಹದ್ದಿಯಿಂದ ಮುಗಳಖೋಡ ಗ್ರಾಮ ಹದ್ದಿಯ ಕಡೆಗೆ ಜಿ ಎಲ ಬಿ ಸಿ ಕೆನಾಲ ರಸ್ತೆ ಮುಖಾಂತರ

ಸಾಗಾಟ ಮಾಡುತ್ತಿದ್ದಾರೆಂದು ಬಾತ್ಮಿ ಬಂದ ಮೇರೆಗೆ, ನಾನು ಮೇಲಾಧಿಕಾರಿಗಳಿಗೆ ಪೋನ ಮೂಲಕ ವಿಷಯ ತಿಳಿಸಿ ಸಿಬ್ಬಂದಿ ಜನರಾದ ಚಾಸಾ 6 ಮತ್ತು 7 ಇವರಿಗೆ ಕರೆದು ವಿಷಯ ತಿಳಿಸಿದೆನು. ಚಾಸಾ 6 ರಿಗೆ ತೂಕದ ಯಂತ್ರ ತೆಗೆದುಕೊಂಡು ಬರಲು ಹಾಗೂ ಚಾಸಾ 7 ರಿಗೆ ಪಂಚರನ್ನು ಕರೆಯಲು ಸೂಚಿಸಿದ ಮೇರೆಗೆ ಅವರು ಬೆಳಗ್ಗೆ 09.20 ಗಂಟೆಗೆ ಚಾಸಾ 6 ತೂಕದ ಯಂತ್ರ ಮತ್ತು ಹಾಗೂ ಚಾಸಾ 7 ಇವರು ಪಂಚರನ್ನು ಕರೆದುಕೊಂಡು ಠಾಣೆಗೆ ಬಂದರು. ಸಿಬ್ಬಂದಿ ಹಾಗೂ ಪಂಚರಿಗೆ ಮಾಹಿತಿ ಬಂದ ವಿಷಯ ತಿಳಿಸಿ ಪಂಚರಿಗೆ ದಾಳಿ ಮಾಡುವ ಕಾಲಕ್ಕೆ ವಸ್ತುಗಳು ಸಿಕ್ಕಾಗ ಅವನ್ನು ಪಂಚನಾಮೆಯಡಿಯಲ್ಲಿ ಜಪ್ತು ಮಾಡಿಕೊಳ್ಳಲು ಅನುವು ಮಾಡಿಕೊಡಬೇಕೆಂದು ಕೇಳಿದಾಗ ಪಂಚರು ಅದಕ್ಕೆ ಒಪ್ಪಿದರು. ನಂತರ ನಾವೆಲ್ಲರೂ ತನಿಖಾ ಸಾಮಗ್ರಿಗಳೊಂದಿಗೆ ಬೆಳಗ್ಗೆ 09.30 ಗಂಟೆಗೆ ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆಎ 22 ಜಿ 629 ನೇದ್ದರಲ್ಲಿ ಠಾಣೆಯಿಂದ ಮಾಹಿತಿ ಬಂದ ಸ್ಥಳಕ್ಕೆ ಹೋರಟೆವು. ಬೆಳಗ್ಗೆ 09.50 ಗಂಟೆಗೆ ಮುಗಳಖೋಡ ಜಿ ಎಲ ಬಿ ಸಿ ಕೆನಾಲ ಪಕ್ಕ ಇರುವ ಐ ಬಿ ಹತ್ತಿರ ಹೋಗಿ ಅಲ್ಲಿ ಐ ಬಿ ಪಕ್ಕದಲ್ಲಿ ಜೀಪನ್ನು ನಿಲ್ಲಿಸಿ ನಾವು ಕೆನಾಲ ಬ್ರಿಡ್ಜ ಹತ್ತಿರ ವಾಚ ಮಾಡುತ್ತಾ ನಿಂತೆವು. ಸುಮಾರು 10.00 ಗಂಟೆಗೆ ಮಾಹಿತಿ ಬಂದ ಪ್ರಕಾರ ಇಬ್ಬರು ವ್ಯಕ್ತಿಗಳು ಒಂದು ಮೋಟಾರಸೈಕಲನಲ್ಲಿ ಪೆಟ್ರೋಲ ಟ್ಯಾಂಕ ಮೇಲೆ ಒಂದು ಚೀಲವನ್ನು ಇಟ್ಟುಕೊಂಡು ಮುಗಳಖೋಡ ಕಮಾನ ಗೇಟ ಕಡೆಯಿಂದ ಮುಗಳಖೋಡ ಐ ಬಿ ಕಡೆಗೆ ಬರುತ್ತಿದ್ದರು. ಅವರನ್ನು ನಾವು ಅಡ್ಡಗಟ್ಟಿ ಹಿಡಿಯಲು ಹೋದಾಗ ಹಿಂದೆ ಕುಳಿತ ವ್ಯಕ್ತಿ ಓಡಿ ಹೋದನು. ನಂತರ ಮೋಟಾರಸೈಕಲ ಚಾಲಕನನ್ನು ವಾಹನ ಹಾಗೂ ಚೀಲದ ಸಮೇತ ಹಿಡಿದುಕೊಂಡೆವು. ಆತನನ್ನು ವಿಚಾರಿಸಿದಾಗ ಅವನು ತನ್ನ ಹೆಸರು ವಿಠ್ಠಲ ಮಾಂಗ ಸಾಃ ಖಣದಾಳ ಎಂದು ಹೇಳಿದನು. ಓಡಿ ಹೋದವನು ಯಾರು ಎಂದು ಕೇಳಿದಾಗ ಆತನು ಬಸವರಾಜ ಗಂಜಾಳೆ ಅಂತಾ ಹೇಳಿದನು. ಚೀಲದಲ್ಲಿ ಏನಿದೆ ಎಂದು

ವಿಚಾರಿಸಿದಾಗ ವಿಠ್ಠಲ ಮಾಂಗ ತಡವರಿಸಿ ಅದರಲ್ಲಿ ಶ್ರೀಗಂಧದ ತುಂಡುಗಳು ಇವೆ ಎಂದು ಹೇಳಿದನು ಹಾಗೂ ಅವುಗಳನ್ನು ಯಾವದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದೇನೆಂದು ಹೇಳಿದನು. ಶ್ರೀಗಂಧದ ಕಟ್ಟಿಗೆಗಳ ಅಕ್ರಮ ಸಾಗಾಟದಲ್ಲಿ ಯಾರು ಯಾರು ಭಾರಿಯಾಗಿದ್ದಾರೆಂದು ಕೇಳಿದಾಗ ವಿಠ್ಠಲ ಮಾಂಗ ಇತನು ಬಸವರಾಜ ಗಂಜಾಳೆ ಶ್ರೀಗಂಧದ ಕಟ್ಟಿಗೆಗಳನ್ನು ಎಲ್ಲಿಂದಲೋ ಕಡಿದು ತಂದಿದ್ದು ತಾನು ಮತ್ತು ಅವನು ಸೇರಿಕೊಂಡು ಶ್ರೀಗಂಧದ ಕಟ್ಟಿಗೆಗಳನ್ನು 3ನೇ ಆರೋಪಿ ಶಿವಲಿಂಗ ಶಿಂಧೆ ಇವರಿಗೆ ಕೊಡುವುದಾಗಿ ತಿಳಿಸಿದನು. ವಿಠ್ಠಲ ಮಾಂಗ ಇತನನ್ನು ಅಲ್ಲಿಯೇ ಸ್ಥಳದಲ್ಲಿ ಬೆಳಗ್ಗೆ 10.15 ಗಂಟೆಗೆ ದಸ್ತಗೀರ ಮಾಡಿ ನಂತರ ಬೆಳಗ್ಗ 10.20 ರಿಂದ 11.30 ಗಂಟೆಯವರೆಗೆ ಪಂಚರಾದ ಚಾಸಾ 2 ಮತ್ತು 3 ಇವರ ಸಮಕ್ಷಮ ಪಂಚನಾಮೆ ಮಾಡಿ ವಿಠ್ಠಲ ಮಾಂಗ ಇತನ ಹತ್ತಿರ ಇದ್ದ ಚೀಲದಲ್ಲಿನ ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ತೂಕ ಮಾಡಿ ನೋಡಿದಾಗ ಅವು 5 ಕೆಜಿ 100 ಗ್ರಾಂ ಇದ್ದವು. ಸದರಿ ಶ್ರೀಗಂಧದ ತುಂಡುಗಳು, 1ನೇ ಆರೋಪಿ ಮೋಟಾರಸೈಕಲ ನಂಃ ಕೆಎ 23 ಇ ಡಿ 6849 ನೇದ್ದನ್ನು ಹಾಗೂ ನೀಲಿ ಕಲರನ ಒಂದು ಕೈಚೀಲನ್ನು ವಶಪಡಿಸಿಕೊಂಡೆವು. ಶ್ರೀಗಂಧದ ಕಟ್ಟಿಗೆ ತುಂಡುಗಳ ಪೈಕಿ 630 ಗ್ರಾಂ ಅಂದರೆ 02 ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಶಾಂಪಲಗಾಗಿ ತೆಗೆದಿಟ್ಟೆವು. ಈ ಎಲ್ಲ ಕುರಿತು 02 ಪೋಟೋಗಳನ್ನು ತೆಗೆಸಿರುತ್ತೇನೆ. ಸ್ಥಳದಲ್ಲಿ ಪಂಚನಾಮೆ ಟೈಪ ಮಾಡಿ ಪ್ರಿಂಟ ತೆಗೆದು ಪಂಚರಾದ ಚಾಸಾ 2 ಮತ್ತು 3 ರವರ ಸಹಿಗಳನ್ನು ಪಡೆದೆನು. ಸಾಕ್ಷಿಯು ಮಾಲುಜಪ್ತಿ ಪಂಚನಾಮೆಯನ್ನು ನಿಪಿ 3 ಎಂದು, ಸಾಕ್ಷಿ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. ಶಾಂಪಲಗಾಗಿ ತೆಗೆದಿಟ್ಟ ಶ್ರೀಗಂಧದ ಕಟ್ಟಿಗೆ ತುಂಡುಗಳ ಪೈಕಿ 630 ಗ್ರಾಂ ಅಂದರೆ 02 ಶ್ರೀಗಂಧದ ಕಟ್ಟಿಗೆ ತುಂಡುಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಈಗಾಗಲೇ

ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ.

3) ನಂತರ ಜಪ್ತುಪಡಿಸಿದ ಶ್ರೀಗಂಧದ ಕಟ್ಟಿಗೆ ತುಂಡುಗಳು, ಮೋಟಾರಸೈಕಲ, ಕೈಚೀಲ ಹಾಗೂ 1ನೇ ಆರೋಪಿಯೊಂದಿಗೆ ಠಾಣೆಗೆ ಬಂದು ಸರ್ಕಾರಿ ತರ್ಫೆ ಒಂದು ಫಿರ್ಯಾಧಿಯನ್ನು ಚಾಸಾ 12 ರಿಗೆ ಕೊಟ್ಟಿದ್ದೇನೆ. ವಶಪಡಿಸಿಕೊಂಡ ವಸ್ತುಗಳನ್ನು ಹಾಗೂ ಆರೋಪಿಯನ್ನು ಚಾಸಾ 12 ರಿಗೆ ವಹಿಸಿದೆನು. ಸಾಕ್ಷಿ ತಾನು ಕೊಟ್ಟಂತಹ ಫಿರ್ಯಾಧಿಯನ್ನು ಗುರುತಿಸಿದ್ದು ಅದನ್ನು ನಿಪಿ 6 ಎಂದು ಸಾಕ್ಷಿ ಸಹಿಯನ್ನು ನಿಪಿ 6(ಎ) ಗುರುತಿಸಲಾಯಿತು.

4) ದಿನಾಂಕಃ 17.06.2018 ರಂದು 2ನೇ ಆರೋಪಿಯು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಆದೇಶ ಪಡೆದುಕೊಂಡು ಬಂದಿದ್ದು ಆಗ ಚಾಸಾ 12 ನನ್ನನ್ನು ಕರೆದು 2ನೇ ಆರೋಪಿಯನ್ನು ತೋರಿಸಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

**<u>ಪಾಟೀ ಸವಾಲುಃ</u>-** 1 ಮತ್ತು 3ನೇ ಆರೋಪಿತರ ಪರ ಶ್ರೀ ಐ ಬಿ ಆರ ವಕೀಲರಿಂದಃ

ನನಗೆ ಬಾತ್ಮಿ ಬಂದಾಗ ನಾನು ಠಾಣೆಯಲ್ಲಿದ್ದೇನು. ಮಾಹಿತಿ ನನಗೆ ದೂರವಾಣಿ ಮುಖಾಂತರ ಬಂದಿದೆ. ಮಾಹಿತಿ ಬಂದ ಕುರಿತು ಠಾಣಾ ದಿನಚರಿ ವಹಿಯಲ್ಲಿ ನಮೂದು ಮಾಡಿದ್ದೇನೆ. ಮಾಹಿತಿದಾರನು ನಿರ್ಧಿಷ್ಟವಾದ ಸಮಯದಲ್ಲಿ ಆರೋಪಿತರು ಶ್ರೀಗಂಧದ ಕಟ್ಟಿಗೆಗಳನ್ನು ಸಾಗಾಟ ಮಾಡುತ್ತಾರೆಂದು ನನಗೆ ತಿಳಿಸಿದ್ದರು. ಫಿರ್ಯಾಧಿಯಲ್ಲಿ ಸಮಯವನ್ನು ನಮೂದು ಮಾಡಿಲ್ಲ ಅನ್ನುವದು ಸರಿ. ಮಾಹಿತಿದಾರನು ಆರೋಪಿತರ ಚಹಾರಾಪಟ್ಟಿ ಮತ್ತು ಗಾಡಿ ನಂಬರ ಹೇಳಿದ್ದಿಲ್ಲ. ಮಾಹಿತಿ ಬಂದ ಅರ್ಧ ಗಂಟೆಯವರೆಗೆ ಠಾಣೆಯಲ್ಲಿ ಇದ್ದೇವು. ಈ ಅರ್ಧ ಗಂಟೆಯಲ್ಲಿ ದೂರು ಕೊಡಲು ತೊಂದರೆ ಇರಲಿಲ್ಲ ಅನ್ನುವದು ಸರಿ. ದೂರು ಕೊಟ್ಟು ರೆಡಗೆ ಹೋಗಲು ತೊಂದರೆ ಇರಲಿಲ್ಲ ಅನ್ನುವದು ಸರಿ.

2) ಸಾಕ್ಷಿಗೆ ನಿಪಿ 4ನ್ನು ತೋರಿಸಿ ಅದರಲ್ಲಿ ಹಿಂದೆ ಮನೆ ಇವೆ ಹಾಗೂ ಕೆಲವು ಜನರು ಮೋಟಾರಸೈಕಲ ಮೇಲೆ ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ಅಲ್ಲಿರುವ ಮನೆಗಳು ತೋಟದ ಮನೆಯೋ ಅಥವಾ ಶೆಡ್ಡೋ ಅಂತಾ ಹೇಳಲಾಗುವುದಿಲ್ಲ. ಪೋಟೋದಲ್ಲಿ ಹಿಂದೆ ರಸ್ತೆ ಮೇಲೆ ಮೋಟಾರಸೈಕಲ ಹೋಗುತ್ತಿರುವ ವ್ಯಕ್ತಿಗಳು ಆಕಸ್ಮಿಕರು ಇರುತ್ತಾರೆ.

3) ದಾಳಿ ಮಾಡಿದ ಸ್ಥಳದಲ್ಲಿ ಸುಮಾರು ಒಂದೂವರೆ ಗಂಟೆಯವರೆಗೆ ಇದ್ದೇವು. ದಾಳಿಮಾಡಿದ ಸ್ಥಳದಲ್ಲಿ ಹಿಂದೆ ಕಾಣುತ್ತಿರುವ ಮನೆಗಳಲ್ಲಿರುವ ವ್ಯಕ್ತಿಗಳನ್ನು ಪಂಚರಾಗಿ ಮಾಡಲು ಕೇಳಲಿಲ್ಲ ಅಂದರೆ ಸಾಕ್ಷಿಯು ದಾಳಿ ಮಾಡುವ ಕಾಲಕ್ಕೆ ನಾವು ನಮ್ಮೊಂದಿಗೆ ಪಂಚರನ್ನು ಕರೆದುಕೊಂಡು ಹೋಗಿದ್ದೇವೆಂದು ಹೇಳುತ್ತಾರೆ. ದಾಳಿ ಸ್ಥಳದಲ್ಲಿ ಇರುವಂತಹ ಮನೆಗಳಲ್ಲಿರುವ ವ್ಯಕ್ತಿಗಳನ್ನು ಪಂಚರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಅಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ.

4) ಓಡಿ ಹೋದ 2ನೇ ಆರೋಪಿ ಕುರಿತು ಆತನ ಚಹಾರಪಟ್ಟಿ ಮತ್ತು ಯಾವ ಬಟ್ಟೆಗಳನ್ನು ದರಿಸಿದ್ದನು ಈ ಕುರಿತು ಫಿರ್ಯಾಧಿಯಲ್ಲಿ ನಮೂದಿಸಿಲ್ಲ ಅನ್ನುವದು ಸರಿ. ಸಾಕ್ಷಿಯು 1ನೇ ಆರೋಪಿಯು 2ನೇ ಆರೋಪಿಯ ಹೆಸರು, ವಿಳಾಸ, ಗುರುತನ್ನು ಹೇಳಿದ್ದರಿಂದ ಅದನ್ನು ನಮೂದಿಸುವ ಅವಶ್ಯಕತೆ ಇರಲಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ.

5) ಮು.ಮಾ.1 ಮತ್ತು 2 ಶಾಂಪಲಗಾಗಿ ತೆಗೆದ ಶ್ರೀಗಂಧದ ಕಟ್ಟಿಗೆ ತುಂಡುಗಳ ಮೇಲೆ ನಿರ್ಧಿಷ್ಟವಾದ ಗುರುತು ಮಾಡಿಲ್ಲ ಅನ್ನುವದು ಸರಿ. ನಾವು ಸರ್ಕಾರಿ ವಾಹನ ಚಾಲಕನನ್ನು ಸೇರಿಸಿ ನಾವು ಒಟ್ಟು ಆರು ಜನ ಹೋಗಿದ್ದೇವು. ನಾನು, ಖಾಸಗಿ ವಾಹನ ಚಾಲಕ(ಆತನ ಹೆಸರು ಈಗ ನೆನಪಿಲ್ಲ), ಚಾಸಾ 6 ಮತ್ತು 7, ಪಂಚರಾದ ಶ್ರೀಶೈಲ ಮತ್ತು ಕಿರಣ ಬಾಗಿ ಹೋಗಿದ್ದೇವು. ದೂರಿನಲ್ಲಿ ನಾನು

ಖಾಸಗಿ ವಾಹನ ಚಾಲಕನನ್ನು ಕರೆದುಕೊಂಡು ಹೋಗಿದ್ದೇವೆಂದು ಬರೆದಿಲ್ಲ ಅನ್ನುವದು ಸರಿ. ಖಾಸಗಿ ಚಾಲಕನ ಹೆಸರು, ವಿಳಾಸ ನಮ್ಮ ಠಾಣಾ ಡೈರಿಯಲ್ಲಿ ನಮೂದಿಸಿಲ್ಲ. ಪೋಲಿಸರನ್ನು ಚಾಲಕನಾಗಿ ತೆಗೆದುಕೊಂಡರೆ ಡೈರಿಯಲ್ಲಿ ನಮೂದಿಸುತ್ತೇವೆಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ದಾಳಿ ಮಾಡುವ ಕಾಲಕ್ಕೆ ಸರ್ಕಾರಿ ಚಾಲಕ ಇರಲಿಲ್ಲ. ಪೋಟೋವನ್ನು ನಮ್ಮ ಚಾಲಕ ತೆಗೆದಿದ್ದಾನೆ. ಪಂಚನಾಮೆ ಹಾಗೂ ಫಿರ್ಯಾಧಿಯಲ್ಲಿ ಪೋಟೋಗಳನ್ನು ಖಾಸಗಿ ಚಾಲಕ ತೆಗೆದಿದ್ದಾನೆಂದು ನಮೂದಿಸಿಲ್ಲ ಅನ್ನುವದು ಸರಿ. ಸದರಿ ಖಾಸಗಿ ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿ ಎಂದು ಕಾಣಿಸಿಲ್ಲ ಹಾಗೂ ಅವನ ಹೇಳಿಕೆ ಪಡೆದಿಲ್ಲ ಅನ್ನುವದು ಸರಿ. ಈ ಕೆಲಸವನ್ನು ತನಿಖಾಧಿಕಾರಿ ಮಾಡಬೇಕಾಗಿತ್ತು ಎಂದು ಸಾಕ್ಷಿ ಹೇಳುತ್ತಾರೆ.

6) ಸರ್ಕಾರಿ ಜೀಪನಲ್ಲಿ ನಾವು ದಾಳಿ ಮಾಡಲು ಹೋಗಿದ್ದೇವು. ಸರ್ಕಾರಿ ಜೀಪ ಕುರಿತು ಲಾಗ ಬುಕ್ಕ ಇರುತ್ತದೆ ಅನ್ನುವದು ಸರಿ. ಲಾಗ ಬುಕ್ಕದಲ್ಲಿ ಆ ದಿನ ಇಷ್ಟು ಪ್ರಯಾಣ ಆಯಿತು ಎಂದು ನಮೂದು ಇದೆ.

7) ಪಂಚನಾಮೆಯಲ್ಲಿ ದಾಳಿ ಮಾಡುವ ಕಾಲಕ್ಕೆ ನನ್ನ ಜೊತೆ ಇದ್ದ ಸಿಬ್ಬಂದಿಗಳ ಕುರಿತು ಅವರ ಹೆಸರುಗಳನ್ನು ನಮೂದಿಸಿಲ್ಲ ಅನ್ನುವದು ಸರಿ. ದಾಳಿ ಮಾಡುವ ಕಾಲಕ್ಕೆ ಸರ್ಕಾರಿ ಜೀಪನಲ್ಲಿ ಪ್ರಿಂಟರ ತೆಗೆದುಕೊಂಡು ಹೋಗಿದ್ದೇವು. ನಾವು ಬ್ಯಾಟರಿ ಹಚ್ಚಿ ಪ್ರಿಂಟರ ಚಾಲು ಮಾಡಿ ಟೈಪ ಮಾಡಿದ ಪಂಚನಾಮೆಯನ್ನು ಪ್ರಿಂಟ ತೆಗೆದೆವು. ದಾಳಿ ಮಾಡುವ ಕಾಲಕ್ಕೆ ತನಿಖಾ ಸಾಮಗ್ರಿಗಳಲ್ಲಿ ಪ್ರಿಂಟರ, ಲ್ಯಾಪಟಾಪ, ಹಾಗೂ ಅವುಗಳ ಎಕ್ಸಸರಿಜಗಳನ್ನು ಕೂಡ ತೆಗೆದುಕೊಂಡು ಹೋಗಿದ್ದೇವು. ಜೀಪ ಬ್ಯಾಟರಿಗೆ ಎಸಿ ಅಥವಾ ಡಿಸಿ ಕರೆಂಟ ಇರುತ್ತದೆ ಎಂದರೆ ಸಾಕ್ಷಿಯು ಎಸಿ ಇರಬಹುದು, ನಾನು ಇಲೆಕ್ಟ್ರಿಕ್ ಟೆಕ್ನಿಶಿಯನ ಅಲ್ಲ ಆದ್ದರಿಂದ ಹೇಳಲು ಆಗುವದಿಲ್ಲ. ಜೀಪ ಬ್ಯಾಟರಿ ಡಿಸಿ ಕರೆಂಟ ಇದ್ದು ಅದರಿಂದ ಪ್ರಿಂಟರಗೆ

ಜೋಡಿಸಬೇಕು ಎಂದರೆ ಇನವರ್ಟರ ಬೇಕಾಗುತ್ತದೆ ಎಂದರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ. ಸ್ಥಳದಲ್ಲಿ ಪಂಚನಾಮೆ ಪ್ರಿಂಟ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

8) ದಿನಾಂಕಃ 26.04.2018 ರಂದು ನಾವು ಯಾವುದೇ ದಾಳಿ ಮಾಡಿಲ್ಲ ಅನ್ನುವದು ಸರಿಯಲ್ಲ. 1ನೇ ಆರೋಪಿಯನ್ನು ದಸ್ತಗೀರ ಮಾಡಿಲ್ಲ ಅನ್ನುವದು ಸರಿಯಲ್ಲ. 1ನೇ ಆರೋಪಿಯಿಂದ ಯಾವುದೇ ಶ್ರೀಗಂಧದ ತುಂಡುಗಳನ್ನು ವಶಪಡಿಸಿಕೊಂಡಿಲ್ಲ ಅನ್ನುವದು ಸರಿಯಲ್ಲ. 1ನೇ ಆರೋಪಿಯು ಶ್ರೀಗಂಧದ ತುಂಡುಗಳನ್ನು 3ನೇ ಆರೋಪಿಗೆ ಕೊಡಲು ಹೊರಟಿದ್ದೇವೆಂದು ಹೇಳಿದನು ಅಂತಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಠಾಣೆಯ ಅಂಕಿಅಂಶಗಳನ್ನು ಹೆಚ್ಚಿಸಲು ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.